# ಮಾಗಿಯ ಮೌನ

ನಮ್ಮ ನೆಲದ ಮರಗಿಡಗಳು ಮಾಗಿ ಕಾಲದಲ್ಲಿ ಬಲಿತು ವೃದ್ಧಾಪ್ಯವನ್ನು ಮುಟ್ಟಿರುವ ಎಲೆಗಳನ್ನು ಧರಿಸಿ ಮೌನವಾಗಿ ನಿಂತಿರುತ್ತವೆ. ಒಂದು ಬಗೆಯ ಜೀವಂತ ಸ್ಥಿರತೆ ಸುತ್ತಸುಳಿದು ಆವರಿಸಿರುತ್ತದೆ. ಅಪರೂಪಕ್ಕೆ, ಬಿಡುಬೀಸಾಗಿ  ಬೀಸಿದರೆ ಎಲೆಗಳಿಗೆ ಎಲ್ಲಿ ನೋವಾಗುವುದೋ ಎಂದು ಮೆಲ್ಲಗೆ ಬೀಸುವ ಸುಳಿಗಾಳಿಗಳಿಗೆ ಮರಗಿಡಗಳ ಎಲೆಗಳು ಒಮ್ಮೆಲೇ ನಡುಗಿ ಭೂಮಿಗೆ ತಲೆ ತಗ್ಗಿಸಿ ಕ್ಷಣ ನೋವಿಂದ ನರಳುತ್ತವೆ. ಆ ನೋವು ತಮ್ಮ ಕೀಲುಗಳು ಸಡಿಲವಾಗಿ ಅಮ್ಮಮರದ ಸಂಬಂಧ ಕಳಚಿಹೋಗುವ ಮುನ್ಸೂಚನೆಯೋ ಎಂಬಂತೆ ಭಾಸವಾಗುವ ಹೃದಯ ಸಂಬಂಧಿ ಭಾವ ಸೆಲೆಯ ಧ್ವನಿಯಂತೆ ತೋರುತ್ತದೆ.

ಅಮ್ಮಮರದಿಂದ ಕಳಚಿಹೋಗುತ್ತೇನೆಂಬ ಭಯವಿಲ್ಲ ಆ ಎಲೆಗಳಿಗೆ. ಅದೊಂದು ಋತುಚಕ್ರನಿಯಮವೆಂದು ಅವಕ್ಕೆ ಗೊತ್ತು. ತಾ ಚಿಗುರಿ ನಲಿದು ಬೆಳೆವಾಗ ಅಮ್ಮಮರದ ಕಾಂಡ ಕೊಂಬೆ ರೆಂಬೆಗಳಲ್ಲಿ ತಮಗಿಂತ ಮುಂಚೆ ಎಷ್ಟೋ ಋತುಮಾನಗಳಲ್ಲಿ ನಕ್ಕು ಬಾಳಿ ಬದುಕಿದ ಎಲೆಗಳ ಗುರುತನ್ನು ಕಂಡಿರುವ ಅನುಭವ ಹೃದಯದಲ್ಲಿ ಭದ್ರವಾಗಿದೆ. ಮೊದಲು ಬಂದವರು ಬಾಳಿಹೋದ ಗುರುತಿನಲ್ಲಿ ಈಗಿರುವ ತನ್ನ ಕರ್ತವ್ಯದ ಮತ್ತು ಕಾಲಧರ್ಮದ ಸುಳಿವು ಸಿಕ್ಕಿದೆ. ತಾನು ಹೋದ ನಂತರ ಮರದ ಬದುಕು ಕೊನೆಯಾಗುವುದಿಲ್ಲ. ಅಮ್ಮಮರದ ಕಾಲಮಾನ ತುಂಬಾ ದೊಡ್ಡದು. ಅದು ತನ್ನ ಕಾಲಾಂತ್ಯವನ್ನು ಕಾಣಬಹುದು, ಒಂದು ದಿನ. ಅದಕ್ಕೆ ಮೊದಲು ಅದು

ತನ್ನಂಥ ಎಷ್ಟೊಂದು ಎಲೆಗಳನ್ನು ಹೆರಬಲ್ಲದು! ನನ್ನ ಸುತ್ತಮುತ್ತ ಸಂದುಗೊಂದುಗಳಲ್ಲಿ ಎಷ್ಟೊಂದು ಹೂಗಳನ್ನು ಅರಳಿಸಬಲ್ಲುದು! ಆ ಹೂವು ಸುತ್ತ ಸುವಾಸನೆ ಬೀರಿ ಎಷ್ಟೊಂದು ದುಂಬಿ ಚಿಟ್ಟೆಗಳನ್ನು ಸೆಳೆಯಬಲ್ಲದು! ನೆಲದ ಮೇಲಿನ ಜೀವರಾಶಿಗೆ ಹೊಸ ಪ್ರೇಮರಾಗವನ್ನು, ಆಸಕ್ತಿ ತುಡಿತದ ಕ್ರಿಯಾಶೀಲತೆಯನ್ನು ತರಬಲ್ಲದು! ಪ್ರತಿ ಹೂವಿನ ಬುಡದಲ್ಲಿ ಮರಿ ಕಾಯೊಂದು ಜೀವತಳೆದು ಬೆಳೆದು ಬಲಿತು ತನ್ನೊಳಗಿನ ಹುಳಿ ಸಿಹಿ ರಸಗಳ ನಡುವೆ ಬೀಜಗಳನ್ನು ಹೊತ್ತು, ಮಾಗಿಯ ಹೊತ್ತಿಗೆ ಮಾಗಿ ಹಣ್ಣಾಗಿ, ತರತರದ ಜೀವಿಗಳಿಗೆ ಆಹಾರವಾಗಿ, ಅಮ್ಮಮರದ ಶ್ರಮಸಾರ್ಥಕತೆಯ ಸಂಕೇತವಾಗಿ ಎಲ್ಲೋ ಗಾಳಿ ಬೀಸಿದ ದಿಕ್ಕಿಗೆ ಹಾರಿಯೋ ಅಥವಾ ಬಿಸಾಕಿದ

ಜಾಗದಲ್ಲಿ ಬೇರುಬಿಟ್ಟೊ ಅಥವಾ ನೀರ ಸೆಳೆತಕ್ಕೆ ಸಿಲುಕಿ ಅದರೊಟ್ಟಿಗೆ ಸಾಗಿ ನೆಲದಮ್ಮನ ತೋಳಿನಾಸರೆಯು ಸಿಕ್ಕಿದ ಸ್ಥಳದಲ್ಲಿ ನೆಲೆಯೂರಿಯೋ– ಮತ್ತೆ ಮೊಳೆತು ಸಂಕುಲದ ಋತುನಿಯತಿಗೆ ಸಾಕ್ಷಿಯಾಗುವುದಿಲ್ಲವೆ!? ಸಕಲಜೀವಜಾಲದ ಕಾಲಚಕ್ರ ಚಲಿಸುವುದಿಲ್ಲವೇ!?

ಅಮ್ಮಮರದ ಈ ನಿರಂತರ ಸೃಷ್ಟಿಕ್ರಿಯೆಗೆ ಈಗ ಮಾಗಿಯ ಚಳಿಯಲ್ಲಿ ಮೌನವಾಗಿ ತಲೆ ತಗ್ಗಿಸಿ ನಿಂತಿರುವ ಮುದಿ ಎಲೆಗಳ ಕೊಡುಗೆ ದೊಡ್ಡದು. ಅಮ್ಮನನ್ನು ಜೀವಂತವಾಗಿಟ್ಟು ಕ್ರಿಯಾಶೀಲವಾಗಿರುವಂತೆ ಹಗಲಿರುಳು ದುಡಿದಿವೆ. ನೆಲದ ಅಂತರಾಳದಿಂದ ಹರಿದುಬಂದ ಜೀವದ್ರವ್ಯವನ್ನು ಹಿಡಿದಿಟ್ಟುಕೊಂಡು, ನೋಡುವ ಕಣ್ಣುಗಳಿಗೆ ತಂಪನ್ನುಣಿಸಿವೆ. ಮಳೆ ಬಂದಾಗ ನೆನೆದು ತೊನೆದು, ವಾಯುಶಕ್ತಿಯನ್ನು ಆಹಾರ ಶಕ್ತಿಯ ಭೋಜನವನ್ನಾಗಿ ಪರಿವರ್ತಿಸಿವೆ.

ಆ ಮುದಿ ಎಲೆಗಳ ಮೌನದಲ್ಲಿ ಒಂದು ಕನಸಿದೆ. ಆ ಕನಸಲ್ಲಿ ತನ್ನ ನಂತರ ತನ್ನ ಗುರುತಿನ ಕಂಕುಳಲ್ಲಿ ಚಿಗುರಿ ನಲಿದಾಡುವ ಎಳೆಯ ಕೋಮಲ ಎಲೆಮರಿಗಳ ಕಲರವ ಕೇಳಿಸುತ್ತದೆ. ಅವು ತಮ್ಮ ಕ್ರಿಯೆಯನ್ನು ಮುಂದುವರಿಸಿಕೊಂಡು ಹೋಗುವ ತಮ್ಮದೇ ರೂಪುಚಹರೆಗಳನ್ನೊಳಗೊಂಡ ತದ್ರೂಪಿಗಳೆಂದು ಅರಿತು ಮುದಿ ಎಲೆಗಳು ಜೀವಸಾರ್ಥಕತೆಯ ನೆಮ್ಮದಿಯಿಂದ ಮತ್ತಷ್ಟು ತುಂಬುಮೌನಕ್ಕೆ ಇಳಿಯುತ್ತವೆ. ಆಗೊಮ್ಮೆ ಈಗೊಮ್ಮೆ ಬೀಸುವ ಸುಳಿಗ್ಗಾಳಿ ತುಸು ಬಿರುಸಾಗಿ ಬೀಸಬಾರದೇಕೆ?– ಎಂಬ ಪ್ರಶ್ನೆ ಮೂಡುತ್ತದೆ.

ಮುದಿ ಎಲೆ ಮುಂಜಾನೆ ಸೂರ್ಯನ ಶಾಖವನ್ನು ಹಿತವಾಗಿ ಹೀರುತ್ತಾ ಆ ಬೆಳಕಲ್ಲಿ ತನ್ನನ್ನು ತಾನೇ ನೋಡಿಕೊಳ್ಳುತ್ತದೆ: ಎಲ್ಲಿ ಹೋಯಿತು ತನ್ನ ಎಳೆಗಾಲದ ಮೃದುಮಧುರ ಕೋಮಲತೆ? ಎಲ್ಲಿ ಮರೆಯಾಯಿತು ಆ ತನ್ನ ಯೌವನದ, ಕಡುವರ್ಣದ ಬಿರುಸಿನ ಚರ್ಮಕಾಂತಿ? ಪ್ರಶ್ನಿಸಿಕೊಳ್ಳುತ್ತಲೇ ಎಲೆ ಮತ್ತೆ ತನ್ನನ್ನು ತಾನು ನೋಡಿಕೊಳ್ಳುತ್ತದೆ. ಹೌದು, ನನ್ನ ಬಣ್ಣ ಹಳದಿಯಾಗುತ್ತಿದೆ. ನನ್ನ ಹೊರಮೈ ಸುಕ್ಕುಗಟ್ಟುತ್ತಿದೆ. ನಯನ ಮನೋಹರವಾಗಿದ್ದ ಅದರಲ್ಲಿ ಕಪ್ಪು ಕಲೆಗಳು ಮೂಡಿವೆ! ತಾನು

ಬಂದ ಕೆಲಸವಾಗಿದೆ. ತಾನು ಬದುಕಿ ಅಮ್ಮಮರಕ್ಕೆ ಭಾರವಾಗಿರಬಾರದು. ತಾನು ಜಾಗ ಖಾಲಿ ಮಾಡಿದರೆ ತಾನೆ ಸೃಷ್ಟಿಗೊಳ್ಳುವ ಮತ್ತೊಂದು ಬದುಕಲು ಸಾಧ್ಯ!?

'ಬೀಸು ಸುಳಿಗ್ಗಾಳಿಯೇ ತುಸು ಬಿರುಸಾಗಿ ಬೀಸು. ನಿನ್ನ ಸೆಳೆತಕ್ಕೆ ಅಮ್ಮಮರದ ಸಂಬಂಧಕೊಂಡಿ ಕಳಚಿಬಿಡಲಿ. ತಾನು ಕೆಳಕ್ಕೆ ಬೀಳುತ್ತೇನೆಂಬ ಭಯವಿಲ್ಲ. ನಿಧಾನವಾಗಿ ತೇಲುತ್ತಾ ಕೆಳಕ್ಕೆ ಇಳಿಯುತ್ತೇನೆ. ಅಲ್ಲಿ ತನ್ನನ್ನು ಆತುಕೊಳ್ಳಲು ಎಲ್ಲ ಅಮ್ಮಂದಿರ ಅಮ್ಮ ಭೂತಾಯಿ ಇರುವಳಲ್ಲ!' ಭೂತಾಯಿಯ ಅಪ್ಪುಗೆಯಲ್ಲಿ, ಸೂರ್ಯನ ಶಾಖದಲ್ಲಿ ಒಣಗಿ ತರಗಾಗಿ, ಕರಗಿ ಕರಗಿ ಕಪ್ಪಾಗಿ, ಮಳೆ ಬಂದಾಗ ಕೊಳೆತು ಗೊಬ್ಬರವಾಗಿ, ಮಣ್ಣಲ್ಲಿ ಬೆರೆತು ಫಲವತ್ತಾಗಿ, ಮತ್ತೆ ಅಮ್ಮಮರದ ಸಹಸ್ರಬೇರುಗಳ ಮೂಲಕ ಅವಳೊಳಗೆ ರಸವಾಗಿ ಹರಿದು ರೂಪಾಂತರ ತಾಳಿ, ಹೊಸ ಚಿಗುರು ಹೂವು ಹಣ್ಣುಗಳಿಗೆ ಜೀವಧಾತುವಾಗಿ ಎಲೆ ಸಂತಸದ ಉಸಿರು ಚೆಲ್ಲುತ್ತದೆ. ಆ ಸಂತಸ ಮರದ ತುಂಬ ನಕ್ಕು ನಲಿದಾಡುತ್ತಿರುವ ಚಿಗುರು ಎಲೆ–ಹೂಗಳಲ್ಲಿ ಮಧುರತೆಯ ಸುವಾಸನೆಯಾಗಿ ಗೋಚರವಾಗುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ನಿನಗೆ ಗೊತ್ತಿಲ್ಲ ಎಂದು ಗೊತ್ತು ಮಾಡಿಕೊಳ್ಳುವುದು ಒಳ್ಳೆಯದು. ಗೊತ್ತಿಲ್ಲದಾಗ ಗೊತ್ತಿದೆ ಎಂದು ನಟಿಸುವುದು ದೊಡ್ಡ ತಪ್ಪು.

—ಲಾವೋ ತ್ಸು

★ ಮನುಷ್ಯನನ್ನು ಆತನ ಉತ್ತರಗಳಿಗಿಂತ ಹೆಚ್ಚಾಗಿ ಆತನ ಪ್ರಶ್ನೆಗಳ ಮೂಲಕ ಅಳೆಯಿರಿ.

—ವಾಲ್ಟೇರ್

★ ಯಾವತ್ತೂ ನಿಮ್ಮ ಹಣವನ್ನು ಕೈಗೆ ಬರುವ ಮುನ್ನವೇ ಖರ್ಚು ಮಾಡಬೇಡಿ.

—ಥಾಮಸ್ ಜೆಫರ್ಸನ್

★ ಯಾವ ಮೂರ್ಖನಾದರೂ ಆಳಬಲ್ಲ; ಅದನ್ನು ಮೂರ್ಖನಾದವನು ಸಹಿಸಿಕೊಳ್ಳಬಲ್ಲ.

—ಹೆನ್ರಿ ಡೇವಿಡ್ ಥೋರೊ

★ ದುಃಖ ತನ್ನನ್ನು ತಾನೇ ಸಂತೈಸಿಕೊಳ್ಳಬಹುದು; ಆದರೆ ಸಂತೋಷವನ್ನು ಯಾವತ್ತೂ ಇನ್ನೊಬ್ಬರ ಜತೆ ಹಂಚಿಕೊಳ್ಳಲೇಬೇಕು.

—ಮಾರ್ಕ್ ಟ್ವೈನ್

★ ಯುದ್ಧದ ಪರಿಣಾಮ ನಮ್ಮ ಕೈಯಲ್ಲೇ ಇರುತ್ತದೆ. ಆದರೆ ಮಾತಿನ ಪರಿಣಾಮ ಎದುರಾಳಿಯ ಕೈಯಲ್ಲಿರುತ್ತದೆ.

—ಹೋಮರ್

★ ಸತ್ಯ ಹೇಳಬೇಕೆಂದಿದ್ದರೆ ಮೊದಲು ಅವರಿಗೆ ತಮಾಷೆಯ ಸಂಗತಿಗಳನ್ನು ಹೇಳಿ. ಇಲ್ಲದಿದ್ದರೆ ನಿಮ್ಮನ್ನು ಕೊಲೆ ಮಾಡಿಯಾರು.

—ಆಸ್ಕರ್ ವೈಲ್ಡ್

★ ಆತ್ಮಸಾಕ್ಷಿಯ ವಿಷಯ ಬಂದರೆ, ಅಲ್ಲಿ ಬಹುಮತಕ್ಕೆ ಜಾಗವಿಲ್ಲ.

—ಮಹಾತ್ಮ ಗಾಂಧಿ

★ ನನಗೆ ಅದೃಷ್ಟದಲ್ಲಿ ನಂಬಿಕೆಯಿದೆ. ನಾನು ಹೆಚ್ಚು ಪರಿಶ್ರಮ ಪಟ್ಟಷ್ಟೂ ಅದೃಷ್ಟ ನನಗೆ ಒಲಿಯುತ್ತದೆ.

—ಥಾಮಸ್ ಜೆಫರ್ಸನ್

★ ಒಬ್ಬರಿಗೆ ಇನ್ನೊಬ್ಬರು ಅಡ್ಡಗ್ವಾಡಿ ಆಗಬಾರದು, ಅಡ್ಡಗ್ವಾಡಿ ಮೇಲಿನ ದೀಪ ಆಗಬೇಕು, ಪರಸ್ಪರ ಸಮೀಪ ಬರಬೇಕು.

-—ದ.ರಾ.ಬೇಂದ್ರೆ